<u>ದಿಃ **18-12-2025** ರಂದು ಸಾಕ್ಷಿಯನ್ನು ಕರೆಯಿಸಿ ಸತ್ಯ ಪ್ರತಿಜ್ಞೆ ಭೋಧಿಸಲಾಯಿತು.</u>

**<u>ಪಾಟೀ ಸವಾಲುಃ ಎದುರುದಾರ ಪರ ವಕೀಲರಿಂದಃ</u>**

ನನ್ನ ಮದುವೆಯು ಯಾವ ವರ್ಷದಲ್ಲಿ ಆಗಿದೆ ಎಂದು ನನಗೆ ನೆನಪಿರುವುದಿಲ್ಲಾ ಆದರೆ ಎದುರುದಾರರ ಮನೆಯ ಮುಂದೆ ಮದುವೆ ಆಗಿದೆ ಎನ್ನುತ್ತಾರೆ. ಮದುವೆಯಾದ ಒಂದು ವರ್ಷದ ನಂತರ ನನಗೆ ಹೆಣ್ಣು ಮಗು ಜನಿಸಿರುತ್ತಾಳೆ. ನನ್ನ ಗಂಡನ ಮನೆಯಲ್ಲಿ ಏಳು ವರ್ಷಗಳ ಕಾಲ ಬಾಳ್ವೆ ಮಾಡಿದ್ದೇನೆ. ನನ್ನ ಗಂಡನ ಮನೆಯಲ್ಲಿ ಬಂಗಾರ ತೆಗೆದುಕೊಂಡು ಬಾ ಎಂದು ತ್ರಾಸ ಕೊಟ್ಟಿರುತ್ತಾರೆ. ನನಗೆ ಮಾನಸಿಕ ಚಿತ್ರಹಿಂಸೆ ಕೊಟ್ಟಿರುತ್ತಾರೆ. ನನ್ನ ಗಂಡನ ಮನೆಯಲ್ಲಿ ಬಂಗಾರ ತಗೊಂಡು ಬಾ ಎಂದು ಹಿಂಸೆ ನೀಡಿದ ಮೇಲೆ ನಾನು ಪೋಲಿಸರಿಗೆ ದೂರು ನೀಡಿರುವುದಿಲ್ಲಾ ಸಾಕ್ಷಿಯು ಮುಂದುವರೆದು ನನ್ನ ಗಂಡನ ಜೊತೆಗೆ ಬಾಳ್ವೆ ಮಾಡಲು ಇಚ್ಚೆ ಇದ್ದರಿಂದ ದೂರು ನೀಡಿಲ್ಲಾ ಎನ್ನುತ್ತಾರೆ.

ನನ್ನ ಗಂಡನ ಮನೆಯಲ್ಲಿ ನನಗೆ ಬಂಗಾರ, ಬೆಳ್ಳಿ ತೆಗೆದುಕೊಂಡು ಬರುವಂತೆ ಹಿಂಸೆ ನೀಡಿಲ್ಲಾ ಎಂದರೆ ಸರಿಯಲ್ಲ. ನನ್ನ ಗಂಡನು ನನ್ನನ್ನು ಕರೆಯಲು ಸುಮಾರು ಸಲ ಬಂದಿದ್ದರು ನಾನು ನನ್ನ ಗಂಡನ ಜೊತೆಗೆ ವಾಸ ಮಾಡಲು ಹೋಗಿಲ್ಲಾ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ನನ್ನ ಗಂಡನ ಮನೆಗೆ ಹೋದರೆ ನನ್ನ ಗಂಡನು ಮನೆಯಲ್ಲಿ ಕರೆದುಕೊಂಡಿಲ್ಲಾ ಎನ್ನುತ್ತಾರೆ. ನನ್ನ ಗಂಡ ನನ್ನನ್ನು ಕರೆಯಲು ಬಂದಾಗ ಆತನಿಗೆ ಬೇರೆ ಮನೆ ಮಾಡುವಂತೆ ಸೂಚಿಸಿದ್ದೇನೆ ಎಂದರೆ ಸರಿಯಲ್ಲ.

ನನ್ನ ಹಾಗೂ ನನ್ನ ಗಂಡನನ್ನು ಒಂದು ಮಾಡಲು ಹಿರಿಯರು ಪ್ರಯತ್ನಪಟ್ಟಿರುವುದಿಲ್ಲಾ ಎಂದರೆ ಸರಿಯಲ್ಲ. ನನ್ನ ಗಂಡನ ವಾರ್ಷಿಕ ಆದಾಯ 6 -7 ಲಕ್ಷ ರೂ. ಎಂದು ತೋರಿಸಲು ದಾಖಲೆಯನ್ನು ನ್ಯಾಯಾಲಯಕ್ಕೆ ಕೊಟ್ಟಿದ್ದೇನೆ. ಯಾವ

ದಾಖಲಾತಿ ಕೊಟ್ಟಿದ್ದಿರಿ ಎಂದರೆ ಸಾಕ್ಷಿಯು ಹೊಲದ ಉತಾರ ಕೊಟ್ಟಿದ್ದೇನೆ ಎನ್ನುತ್ತಾರೆ. ನನ್ನ ಗಂಡನು ಬಡ್ಡಿ ವ್ಯವಹಾರ ಮಾಡುತ್ತಾನೆ ಎಂದು ಯಾವ ಆಧಾರದ ಮೇಲೆ ಅರ್ಜಿಯಲ್ಲಿ ನಮೂದಿಸಿದ್ದಿರಿ ಎಂದರೆ ಹೊಲದಿಂದ ಬಂದ ಆದಾಯದ ಮೇರೆಗೆ ಬಡ್ಡಿ ವ್ಯವಹಾರ ಮಾಡುತ್ತಾರೆ ಎನ್ನುತ್ತಾರೆ.

ನನ್ನ ಗಂಡ ಬಡ್ಡಿ ವ್ಯವಹಾರ ಮಾಡುತ್ತಾರೆ ಎಂದು ನನ್ನ ಬಾಯಿ ಮಾತಿನ ಹೇಳಿಕೆ ಎಂದರೆ ಯಾವ ದಾಖಲೆಯು ಇರುವುದಿಲ್ಲಾ ಎಂದರೆ ಸಾಕ್ಷಿಯು ಹೊಲದ ಆದಾಯದಿಂದ ಬಡ್ಡಿ ವ್ಯವಹಾರ ನಡೆಸುತ್ತಾರೆ ಎನ್ನುತ್ತಾರೆ. ನನ್ನ ಗಂಡನು ಕಬ್ಬನ್ನು ಯಾವ ಕಾರ್ಖಾನೆಗೆ ಕಳುಹಿಸುತ್ತಾರೆ ಹಾಗೂ ಕಬ್ಬಿನ ಬಿಲ್ಲು ಯಾರ ಹೆಸರಿನಲ್ಲಿ ಆಗುತ್ತದೆ ಎಂದು ಸಾಕ್ಷಿಯು ಗೋಕಾಕ ಸಕ್ಕರೆ ಕಾರ್ಖಾನೆಗೆ ಕಳುಹಿಸುತ್ತಾರೆ ಎನ್ನುತ್ತಾರೆ. ನನ್ನ ಗಂಡನು ಕಬ್ಬನ್ನು ಕಾರ್ಖಾನೆಗೆ ಕಳುಹಿಸಿದ ಬಿಲ್ಲನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿದ್ದಿರಾ ಎಂದರೆ ನನ್ನ ಕೈಯಲ್ಲಿ ಏನೂ ಇಲ್ಲಾ ಎನ್ನುತ್ತಾರೆ.

ಮುಂದುವರೆದ ಪಾಟೀ ಸವಾಲಿಗೆ ಸಮಯವಕಾಶ ನೀಡಿ, ಮುಂದೂಡಲಾಯಿತು.

(ನನ್ನ ಉಕ್ತ ಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)

ಓ ಹೆ ಕೆ ಸರಿ ಇದೆ

**(ಅಭಿನಯ)**
**ಹೆ.ದಿ.&ನ್ಯಾ.ದಂ., ಗೋಕಾಕ.**